'ನೋಡೇ, ಒಬ್ಬ ಯುವಕ ನಿತ್ಯ ನನ್ನನ್ನು ಕಾಡಿಸ್ತಾನೆ.'
'ಏಕೆ?'
'ನನ್ನನ್ನು ಮದುವೆಯಾಗುವ ಆಸೆಯಂತೆ.'
'ಮದುವೆ ಮಾಡಿಕೋ.'
'ಅವನನ್ನು ಮದುವೆಯಾಗಲು ನನಗಿಷ್ಟವಿಲ್ಲ, ಅವನು ಬೇಕಾದ್ರೆ ಸಾಯ್ಲಿ.'
'ನಿನ್ನನ್ನು ಮದುವೆಯಾದ ಎರಡೇ ತಿಂಗಳಿಗೆ ಅವನೇ ನೇಣು ಹಾಕ್ಕೊಂಡು ಸಾಯ್ತಾನೆ. ನೀನೇಕೆ ಯೋಚ್ನೆ ಮಾಡ್ತೀಯ!'

***

'ಬುಧವಾರ ರಾತ್ರಿ ನೀವೆಲ್ಲಿದ್ದೀರಿ?' ವಕೀಲರು ಯುವತಿಯನ್ನು ಪ್ರಶ್ನಿಸಿದರು.
'ನನ್ನ ಬಾಯ್‌ಫ್ರೆಂಡ್ ಜೊತೆ ಸಿನಿಮಾಕ್ಕೆ ಹೋಗಿದ್ದೆ.'
'ಗುರುವಾರ?'
'ನಮ್ಮ ಪಕ್ಕದ ಮನೆಯವರೊಂದಿಗೆ ನಾಟಕ ನೋಡಲು ಹೋಗಿದ್ದೆ.'
'ಇವತ್ತು ಸಂಜೆ ನಿಮ್ಮ ಪ್ರೋಗ್ರಾಮ್ ಏನು?'
'ಅಬ್ಜೆಕ್ಷನ್ ಲಾರ್ಡ್' ಎದುರಿಗಿದ್ದ ಯುವ ವಕೀಲರು ಗಟ್ಟಿಯಾಗಿ ಹೇಳಿದರು, 'ನಾನಾಗಲೇ ಈ ಪ್ರಶ್ನೆಯನ್ನು ಕೇಳಿಬಿಟ್ಟಿದ್ದೇನೆ.'

***

'ಹಲ್ಲು ಕಿತ್ತಾಯ್ತು, ಮುನ್ನೂರು ರೂಪಾಯಿ ಕೊಡಿ.'
'ಒಂದು ಹಲ್ಲು ಕಿತ್ತರೆ ನೂರು ರೂಪಾಯಿಯೆಂದು ಅಂತ ಹೇಳಿದ್ರಲ್ಲ ಡಾಕ್ಟ್ರೇ?'
'ಹೌದು ಹೇಳಿದ್ದೆ. ಆದ್ರೆ ನಿಮ್ಮ ಕಿರುಚಾಟ ಕೇಳಿ ಹಲ್ಲು ಕೀಳಿಸಲು ಹೊರಗೆ ಕೂತಿದ್ದ ಇನ್ನಿಬ್ಬರು ಆಸ್ಪತ್ರೆಯಿಂದ ಹೊರಗೆ ಹೋಗಿದ್ದಾರೆ!'

***

ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಒಬ್ಬರು ತುಂಬ ಹೊತ್ತಿನಿಂದ ತಮಗೆ ಬರುತ್ತಿದ್ದ ಸೀನನ್ನು ತಡೆದುಕೊಳ್ಳುತ್ತಿದ್ದರು. ಸೀನು ಬರುತ್ತಿದೆ ಎಂದು ಅನ್ನಿಸಿದಾಗ ವಿಚಿತ್ರ ಮುಖವನ್ನು ಮಾಡಿ ಸೀನನ್ನು ತಡೆದುಕೊಳ್ಳುತ್ತಿದ್ದರು. ಅವರ ಎದುರಿಗೆ ಕೂತಿದ್ದ ಪ್ರಯಾಣಿಕರು ಇದನ್ನೆಲ್ಲಾ ಗಮನಿಸುತ್ತಿದ್ದರು. ಕಡೆಗೆ ತಡೆದುಕೊಳ್ಳಲಾಗದೆ ಪ್ರಶ್ನಿಸಿದರು, 'ಸಾರ್, ನೀವೇಕೆ ಸೀನನ್ನು ತಡೆದುಕೊಳ್ತಿದ್ದೀರ?'
'ನಿಮಗೆ ಸೀನು ಬಂದರೆ, ನಾನು ನಿಮ್ಮನ್ನು ಜ್ಞಾಪಿಸಿಕೊಳ್ತಿದ್ದೇನೆ ಅಂತ ತಿಳಿದುಕೊಂಡು ಕೂಡ್ಲೆ ನಾನಿದ್ದಲ್ಲಿಗೆ ನೀವು ಬರಬೇಕು ಎಂದು ನನ್ನ ಹೆಂಡತಿ ಹೇಳಿದ್ದಾಳೆ' ಅಂದ ಅವರು ಮತ್ತೆ ತಮ್ಮ ಸೀನನ್ನು ತಡೆದುಕೊಂಡರು.
'ರೈಲು ನಿಂತ ನಂತರ ಅವರ ಬಳಿಗೆ ಹೋಗಿಬಿಡಿ.'
'ಅವಳು ಸತ್ತು ನಾಲ್ಕು ದಿನಗಳಾಗಿವೆ!'

***




'ಹೆಂಡ ಕುಡಿಯೋದು ತುಂಬ ಕೆಟ್ಟದ್ದು.'
'ಏಕೆ?'
'ಅಲ್ನೋಡಿ, ಅಲ್ಲಿ ಇಬ್ಬರು ನಿಂತು ಮಾತಾಡ್ತಿದ್ದಾರೆ. ಒಂದು ವೇಳೆ ನಾನೇನಾದರು ಕುಡಿದಿದ್ದರೆ, ನನಗೆ ಅವರು ನಾಲ್ಕು ಜನರಾಗಿ ಕಾಣಿಸುತ್ತಿದ್ದರು.'
'ಅಯ್ಯೋ, ಅಲ್ಲಿರೋರು ಒಬ್ಬರೇ!'

***

ಕಳ್ಳನೊಬ್ಬ ಲೇಖಕರೊಬ್ಬರ ಮನೆಗೆ ನುಗ್ಗಿದ. ಆ ವೇಳೆಯಲ್ಲಿ ಲೇಖಕರು ವರಾಂಡದ ನೆಲದ ಮೇಲೆ ಮಲಗಿದ್ದರು. ಲೇಖಕರು ನಿದ್ರಿಸುತ್ತಿದ್ದಾರೆಂದು ತಿಳಿದ ಕಳ್ಳ ತನ್ನ ರಗ್ಗನ್ನು ಅವರ ಪಕ್ಕದಲ್ಲಿ ಹಾಸಿ ಕದಿಯಲು ಕೋಣೆಗೆ ಹೋದ. ಆದರೆ ಅಲ್ಲಿ ಏನೂ ಸಿಗಲಿಲ್ಲ. ನಂತರ ಕಳ್ಳ ಮನೆಯನ್ನೆಲ್ಲಾ ತಡಕಾಡಿದ. ಕಳ್ಳನಿಗೆ ಮನೆಯಲ್ಲೇನೂ ಸಿಗಲಿಲ್ಲ. ಕಳ್ಳ ವರಾಂಡಕ್ಕೆ ಬಂದಾಗ ಲೇಖಕರು ಈಗ ಅವನ ರಗ್ಗಿನ ಮೇಲೆ ಆರಾಮಾಗಿ ಮಲಗಿದ್ದರು. ಕಳ್ಳ ಓಡಿ ಹೋಗುವುದೇ ಲೇಸೆಂದು ತಿಳಿದು ಹೊರಹೋಗಬೇಕೆಂದಿದ್ದಾಗ ಲೇಖಕರು ಹೇಳಿದರು, 'ನೋಡಪ್ಪಾ, ಹಾಗೇ ಸ್ವಲ್ಪ ಬಾಗಿಲನ್ನೂ ಹಾಕ್ಕೊಂಡು ಹೋಗು.'
'ಇಲ್ಲ ಸ್ವಾಮಿ, ನಾನು ಬಾಗಿಲು ಹಾಕ್ಕೊಂಡು ಹೋಗಲ್ಲ. ನಿಮಗೆ ನಾನು ರಗ್ಗನ್ನು ಕೊಟ್ಟಂತೆ, ಇನ್ನೊಬ್ಬ ಕಳ್ಳ ಬಂದು ನಿಮಗೆ ಕಂಬಳಿಯನ್ನೂ ಕೊಟ್ಟು ಹೋಗಬಹುದು!' ಎಂದು ಕಳ್ಳ ಬರಿಗೈಯಲ್ಲಿ ಹೊರಗೆ ಹೋದ.

***

ಒಂದು ಆನೆ ನದಿಯಲ್ಲಿ ಸ್ನಾನ ಮಾಡುತ್ತಿತ್ತು. ಆಗ ಇಲಿಯೊಂದು ಓಡೋಡಿ ನದಿಯ ದಡಕ್ಕೆ ಬಂದು ಗಟ್ಟಿಯಾಗಿ ಹೇಳಿತು, 'ಏಯ್ ಆನೆ, ಇತ್ತ ಬಾ.' ಆನೆ ಇಲಿಯನ್ನು ಸಿಟ್ಟಿನಿಂದ ನೋಡಿ, ನಂತರ ಏನೋ ಯೋಚಿಸಿಕೊಂಡು ನೀರಿನಿಂದ ಹೊರ ಬಂತು. ಇಲಿ ಆನೆಯನ್ನು ಆಪಾದಮಸ್ತಕ ನೋಡಿ ಹೇಳಿತು, 'ಸರಿ, ನೀನೀಗ ನೀರಿಗೆ ಹೋಗಿ ಸ್ನಾನ ಮಾಡಬಹುದು.' 'ಇಲಿಯೇ, ನಿನಗೆಷ್ಟು ಸೊಕ್ಕಿದೆ! ಮೊದ್ಲು ಹೇಳು, ನೀನ್ಯಾಕೆ ನನ್ನನ್ನು ಕರೆದೆ?' ಆನೆ ಘೀಳಿಟ್ಟಿತು. ಇಲಿ ತನ್ನೆರಡೂ ಕೈಗಳನ್ನು ಜೋಡಿಸಿ ಹೇಳಿತು, 'ಆನೆಯಣ್ಣಾ ರೇಗಬೇಡ, ನಾನು ನನ್ನ ಹಾಫ್‌ಪ್ಯಾಂಟ್ ಕಳಚಿಟ್ಟು ಮರದ ಮೇಲೆ ಹತ್ತಿದ್ದೆ. ಇಲ್ಲಿ ಬಂದು ನೋಡಿದಾಗ ಅದು ಇರಲಿಲ್ಲ. ನೀನೆಲ್ಲಾದರು ಮರೆತು ನನ್ನ ಹಾಫ್‌ಪ್ಯಾಂಟ್ ಹಾಕ್ಕೊಂಡು ಬಿಟ್ಟಿದ್ದೀಯೇನೋ ಅಂತ ನೋಡಲು ನಿನ್ನನ್ನು ಕರೆದೆ, ಅಷ್ಟೆ!'

ಹಿಂದಿಯಿಂದ ಸಂಗ್ರಹ:
**ಡಿ.ಎನ್. ಶ್ರೀನಾಥ್, ಶಿವಮೊಗ್ಗ**

## ನಗು-ನಗ್ನ ಸತ್ಯ

ರಾತ್ರಿಯ ನಿದ್ದೆ... ಕಣ್ಣ ರೆಪ್ಪೆಗಳನ್ನು ಬಂದ್ ಮಾಡುವುದರಿಂದಲ್ಲ, ನೆಟ್ ಬಂದ್ ಮಾಡುವುದರಿಂದ ಆವರಿಸುತ್ತದೆ.

***

ಹಿಂದೆ ಜನರು 'ಬೇಟಾ' (ಮಗ) ಬೇಕೆಂದು ದುಂಬಾಲು ಬೀಳುತ್ತಿದ್ದರು, ಈಗ ಡೇಟಾ ಬೇಕೆಂದು ದುಂಬಾಲು ಬೀಳುತ್ತಿದ್ದಾರೆ!

***

ಮೊಬೈಲ್ ಕೆಟ್ಟು ಹೋದರೆ ಅದಕ್ಕೆ ಮಕ್ಕಳು ಜವಾಬ್ದಾರರು ಮತ್ತು ಮಕ್ಕಳು ಕೆಟ್ಟು ಹೋದರೆ ಅದಕ್ಕೆ ಮೊಬೈಲ್ ಜವಾಬ್ದಾರಿ ಎನ್ನುವುದು ಇಂದಿನ ಪಾಲಕರ ಅತಿ ದೊಡ್ಡ ದೋಷಾರೋಪಣೆಯಾಗಿದೆ!

***

ಹಿಂದೆ ಹೆತ್ತವರ ಕಾಲು ಮುಟ್ಟಿ ನಮಸ್ಕರಿಸಿ ಮಕ್ಕಳು ಮನೆಯಿಂದ ಹೊರಡುತ್ತಿದ್ದರು; ಇಂದು ಮೊಬೈಲ್ ಚಾರ್ಜಿಂಗ್ ಪೂರ್ತಿಯಾಗಿದೆಯೆಂದು ಖಾತರಿ ಪಡಿಸಿಕೊಂಡು ಹೊರಗೆ ಹೋಗುತ್ತಾರೆ!

***

ಹಿಂದೆ ತನ್ನಷ್ಟಕ್ಕೆ ತಾನೇ ಮಾತಾಡುತ್ತಾ ನಡೆಯುತ್ತಿದ್ದವರನ್ನು ಜನರು ವಿಚಿತ್ರ ರೀತಿಯಲ್ಲಿ ನೋಡಿ ನಗುತ್ತಿದ್ದರು. ಇಂದು ಹ್ಯಾಂಡ್ಸ್ ಫ್ರೀ ಆಗಿ ಲೋಕಾಭಿರಾಮದ ಮಾತಾಡುವುದು ಪ್ರತಿಷ್ಠೆಯ ಸಂಕೇತವಾಗಿದೆ!

ಸಂಗ್ರಹ: **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**